**ಸಾಕ್ಷಿಯನ್ನು ದಿಃ 10.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಬಿ.ಜಿ.ಕೆ ವಕೀಲರಿಂದಃ**

ನನ್ನ ಊರು ಗುಳ್ಳದ ಪುರ ಗ್ರಾಮ ಹೊಳೆನರಸೀಪುರ ತಾಲ್ಲೂಕಿನಿಂದ ಬಂದಿರುತ್ತೇನೆ. ನಮಗೆ ವ್ಯವಸಾಯ ಇದೆ ನಾನು ಕೆಲಸ ಮಾಡುವುದಿಲ್ಲ. ಜಮೀನು ನನ್ನ ಅಜ್ಜಿಗೆ ಸೇರಿದ್ದು. ಸ್ವಾಮಿಗೌಡ ನನ್ನ ತಂದೆ. ಅವರು ಅಪಘಾತ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಆ ದಿನ ಅವರು ಕೆಲಸದ ನಿಮಿತ್ತ ಮೈಸೂರಿಗೆ ಬಂದಿದ್ದರು. ಬೈಕ್ ಅನ್ನು ನಾನೇ ಚಲಾಯಿಸುತ್ತಿದ್ದೆ. ಅಪಘಾತ ಸ್ಥಳ ನಾಲ್ಕು ರಸ್ತೆ ಕೂಡುವ ಸ್ಥಳ ಎಂದರೆ ಮೂರು ರಸ್ತೆ ಕೂಡುವ ಸ್ಥಳ ಎನ್ನುತ್ತಾರೆ. ಅಲ್ಲಿ ಸಿಗ್ನಲ್ ಇಲ್ಲ. ಟ್ರಾಕ್ಟರ್ ನನ್ನ ಎದುರುಗಡೆಯಿಂದ ಬರುತ್ತಿತ್ತು. ಸರಿಯಾಗಿ ನೆನಪಿಗೆ ಬರುತ್ತಿಲ್ಲ. ಟ್ರಾಕ್ಟರ್ ಡಿ.ಸಿ. ಕಚೇರಿ ಕಡೆಯಿಂದ ಬರುತ್ತಿತ್ತು ಎಂದರೆ ಸರಿಯಲ್ಲ. ಅಪಘಾತ ಸ್ಥಳದ ರಸ್ತೆ ಅಗಲ ಎಷ್ಟಿತ್ತು ಎಂದರೆ ಅದು ಡಬಲ್ ರೋಡ್ ಎನ್ನುತ್ತಾರೆ. ಟ್ರಾಕ್ಟರ್ ಹುಣಸೂರು ಕಡೆಯಿಂದ ಬಂದು ಅದರ ಬಲಭಾಗಕ್ಕೆ ತಿರುಗಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಯಾವುದೇ ಸೂಚನೆ ನೀಡಿಲ್ಲ ಎನ್ನುತ್ತಾರೆ. ಟ್ರಾಕ್ಟರ್ ಡಿವೈಡರ್ ಪಕ್ಕದಲ್ಲಿ ಎದುರುಗಡೆಯಿಂದ ಬರುತ್ತಿತ್ತು ಎಂದರೆ ಸರಿ. ಅಪಘಾತ ಯಾವ ರೀತಿ ಆಯಿತು ಎಂದು ನನಗೆ ನೆನಪಿಲ್ಲ. ಟ್ರಾಕ್ಟರ್ ಅನ್ನು ಅಂದಾಜು 5 ಮೀಟರ್ ಅಂತರದಲ್ಲಿ ಗಮನಿಸಿದ್ದೇನೆ.

2. ನನ್ನ ಬೈಕ್ ನ ಮುಂಭಾಗ ಪೂರ್ತಿ ಜಖಂ ಆಗಿತ್ತು. ಟ್ರಾಕ್ಟರ್ ಗೆ ಯಾವುದೇ ಜಖಂ ಆಗಿಲ್ಲ. ದಾಖಲೆಗಳ ಪ್ರಕಾರ ಟ್ರಾಕ್ಟರ್ ನ ಟ್ರಯಲರ್ ಗೆ ಜಖಂ ಆಗಿದೆ ಎಂದರೆ ನನಗೆ ನೆನಪಿಲ್ಲ. ಟ್ರಾಕ್ಟರ್ ಮುಂದೆ ಹೋಗಿದ್ದು ನಾನೇ ಹಿಂದಿನಿಂದ ಹೋಗಿ ಟ್ರಾಕ್ಟರ್ ನ ಹಿಂಭಾಗದ ಟ್ರಯಲರ್ ಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನನಗೆ ಪ್ರಜ್ಞೆ ಇದ್ದರೂ ಸಹ ಪ್ರಜ್ಞೆ ತಪ್ಪಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವೈಧ್ಯಕೀಯ ದಾಖಲೆಗಳಲ್ಲಿ ಪ್ರಜ್ಞೆ ತಪ್ಪಿರುವ ಬಗ್ಗೆ ನಮೂದಿರುವುದಿಲ್ಲ ಎಂದರೆ ಗೊತ್ತಿಲ್ಲ.

3. ಅಪಘಾತ ಆದ ತಕ್ಷಣ ಬೃಂದಾವನ ಆಸ್ಪತ್ರೆಗೆ ಹೋಗಿರುತ್ತೇನೆ. ನಾಲ್ಕು ತಿಂಗಳ ನಂತರ ಪುನಃ ಸಮಸ್ಯೆ ಕಂಡು ಬಂದಿದ್ದು ಜೆ.ಎಸ್.ಎಸ್ ಗೆ ಹೋಗಿರುತ್ತೇನೆ. ಬೃಂದಾವನ ಆಸ್ಪತ್ರೆಯಲ್ಲಿ ಯಾವ ರೀತಿ ಗಾಯ ಆಗಿದೆ ಎಂದು ನಾನು ಹೇಳಿ ಬರೆಯಿಸಿಲ್ಲ. ಯಾರು ಬರೆಸಿದ್ದಾರೆ ಎಂದು ಗೊತ್ತಿಲ್ಲ. ಬೃಂದಾವನ ಆಸ್ಪತ್ರೆಯಲ್ಲಿ ಡಾ. ಅನಿಲ್ ಸಾಂಗ್ಲಿ ರವರು ಚಿಕಿತ್ಸೆ ನೀಡಿರುತ್ತಾರೆ. ನನ್ನ ಹಿಂಬದಿ ಸವಾರನಿಗೆ ಏನೆಲ್ಲ ಗಾಯಗಳಾಗಿತ್ತು ಎಂದು ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದ ಟ್ರಾಕ್ಟರ್ ನಂ. ಕೆಎ-09-ಎಎ-0043 ಆಗಿದೆ. ಟ್ರೈಲರ್ ಇತ್ತೊ ಇಲ್ಲವೊ ಎಂದು ಮುಂದಿನಿಂದ ಡಿಕ್ಕಿ ಪಡಿಸಿದ ಕಾರಣ ಗಮನಿಸಿಲ್ಲ. ಮುಂದಿನ ಇಂಜಿನ್ ಅನ್ನು ಮಾತ್ರ ಗಮನಿಸಿದ್ದೆ. ನನ್ನ ತಂದೆಗೆ ಡಿಕ್ಕಿ ಪಡಿಸಿದ ವಾಹನದ ಸಂಖ್ಯೆಯನ್ನು ನನ್ನ ಹಿಂದೆ ಬೇರೋಂದು ಬೈಕ್ ಗಳಲ್ಲಿ ಬರುತ್ತಿದ್ದ ನನ್ನ ಸ್ನೇಹಿತರು ಹೇಳಿರುತ್ತಾರೆ. ಟ್ರೈಲರ್ ಇತ್ತೋ ಇಲ್ಲವೋ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ನನ್ನ ಜನ್ಮ ದಿಃ 11.09.2005. ನಾನು ಡಿಪ್ಲೋಮೋ ಮಾಡಿದ್ದೇನೆ ಈಗ ಮನೆಯಲ್ಲಿಯೇ ಇದ್ದೇನೆ.

4. ನಾನು ರೂ. 20,000/- ದುಡಿಯುತ್ತಿದ್ದ ಬಗ್ಗೆ ವ್ಯವಸಾಯವಾದ ಕಾರಣ ದಾಖಲೆ ಹಾಜರು ಪಡಿಸಿರುವುದಿಲ್ಲ. ಅಪಘಾತದಿಂದ ಮೂರು ಲಕ್ಷ ಖರ್ಚಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಟ್ರೈಲರ್ ಗೆ ವಿಮೆ, ನೊಂದಣಿ ಇರಲಿಲ್ಲ ಆದ ಕಾರಣ 1 ನೇ ಎದುರುದಾರರು ಪರಿಹಾರ ನೀಡಲು ಭಾದ್ಯರು ಎಂದರೆ ನನಗೆ ಗೊತ್ತಿಲ್ಲ. ಔಷಧಿ ಬಿಲ್ಲುಗಳಿಗೆ ಸಲಹಾ ಚೀಟಿಗಳನ್ನು ಸಲ್ಲಿಸದೇ ಇರುವ ಕಾರಣ ಸದರಿ ವೆಚ್ಚವನ್ನು ಭರಿಸಲು ನಾವು ಭಾದ್ಯರಲ್ಲ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳನ್ನು ಸೃಷ್ಠಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ ನಾನು ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಹೆಲ್ಮೆಟ್ ಹಾಕಿದ್ದರೆ ಪೋಲೀಸ್ ದಾಖಲೆಗಳಲ್ಲಿ ಉಲ್ಲೇಖ ಇರುತ್ತಿತ್ತು ಎಂದರೆ ಸರಿಯಲ್ಲ. ನಾನಾಗೆ ಟ್ರೈಲರ್ ಗೆ ಹಿಂದಿನಿಂದ ಹೋಗಿ ಡಿಕ್ಕಿ ಪಡಿಸಿರುತ್ತೇನೆ

ಎಂದರೆ ಸರಿಯಲ್ಲ. ನನ್ನ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಉತ್ತರ ನೀಡಿರುತ್ತೀರಿ ಎಂದರೆ ಹೌದು ಎಂದು ಉತ್ತರಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.